**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮಾಗಡಿ.**

**ಸಿ.ಸಿ ನಂಃ 673/2017**

**ಚಾಸಾ 3 ಃ ಪ್ರಾಸಾ 1**

| | |
|---|---|
| **ಹೆಸರು** | ಬಾಲಕೃಷ್ಣ |
| **ತಂದೆ/ಗಂಡನ ಹೆಸರು** | ಗಂಗಪ್ಪ |
| **ವಯಸ್ಸು** | 34 |
| **ಉದ್ಯೋಗ** | ಖಾಸಗಿ ಕೆಲಸ |
| **ವಾಸ** | ದಾಸರಹಳ್ಳಿ |

ದಿನಾಂಕಃ 02-02-2021 ರಂದು ಸಾಕ್ಷಿಯನ್ನು ಪ್ರ ಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-4 ನನ್ನ ಹೆಂಡತಿ. ಆರೋಪಿ ನನ್ನ ತಮ್ಮ. 2016 ನೇ ಇಸವಿ ದಸರಾ ವೇಳೆಯಲ್ಲಿ ರಾತ್ರಿ 10.30 ರ ಸಮಯದಲ್ಲಿ ಲಕ್ಷ್ಮಿಪುರದಿಂದ ಬೆಂಗಳೂರು ಕಡೆಗೆ ನನ್ನ ತಾಯಿಯ ತಿಥಿ ಕಾರ್ಯವನ್ನು ನಮ್ಮ ಊರಿನಲ್ಲಿ ಮುಗಿಸಿಕೊಂಡು ನಾನು ಚಾಸಾ-4,ರವರು ಆರೋಪಿಯವರು ಇಂಡಿಕಾ ಕಾರಿನ ನಂ. 2774 ರಲ್ಲಿ ಬರುತ್ತಿದ್ದು, ಆರೋಪಿಯವರು ಕಾರು ಚಲಾಯಿಸುತ್ತಿದ್ದು, ಲಕ್ಕುಪ್ಪೆ ಎಂಬ ಸ್ಥಳದಲ್ಲಿ ಎದುರುಕಡೆಯಿಂದ ಬರುತ್ತಿದ್ದ ಪಲ್ಸರ್ 180 ನೀಲಿ ಬಣ್ಣದ ಬೈಕು, ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದು ತಾವೇ ನಮ್ಮ ಕಾರಿಗೆ ಗುದ್ದಿರುತ್ತಾರೆ. ಸದರಿ ಅಪಘಾತದಲ್ಲಿ ಪಲ್ಸರ್ ಬೈಕಿನಲ್ಲಿ ಇದ್ದ ಇಬ್ಬರಲ್ಲಿ ಒಬ್ಬರು ಸ್ಥಳದಲ್ಲೇ ಮೃತರಾಗಿರುತ್ತಾರೆ ಮತ್ತೊಬ್ಬರು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯ ಮರಣ ಹೊಂದಿರುತ್ತಾರೆ. ಸದರಿ ವೇಳೆಯಲ್ಲಿ ನನಗೂ ಕೂಡ ಮೂಗಿಗೆ ಗಾಯವಾಗಿರುತ್ತದೆ ಮತ್ತು ಚಾಸಾ-4 ನನ್ನ ಹೆಂಡತಿ ಮಂಡಿಗೆ ಗಾಯವಾಗಿರುತ್ತದೆ. ನಾನು ಮತ್ತು ಚಾಸಾ-4 ರವರು ಬೆಂಗಳೂರಿನ ವಿಜಯನಗರದ ಗಾಯತ್ರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ.

ಸದರಿ ಪಲ್ಸರ್ ಬೈಕ್ ನಲ್ಲಿ ಬಂದಿದ್ದ ಸವಾರರು ಮದ್ಯಪಾನ ಮಾಡಿದ್ದರು. ಸದರಿ ವೇಳೆ ಹೇಳಿದ ಹೇಳಿಕೆಯನ್ನು ನಾನು ಠಾಣೆಯಲ್ಲಿ ನೀಡಿರುತ್ತೇನೆ. ಆರೋಪಿಯು ನ್ಯಾಯಾಲಯದ ಮುಂದೆ ಇರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು.**

(ಉಖ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಹಾಡಲಾಯಿತು)

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮಾಗಡಿ.